# ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಲಯ

# ಬಳ್ಳಾರಿ

## ವಿಶೇಷ ಮೊಕದ್ದಮೆ ಸಂಖ್ಯೆಃ59/2017

**ಪಿ.ಡಬ್ಲ್ಯೂಃ15 (ಸಿಡಬ್ಲ್ಯೂಃ 89 )**

| | | |
|---|---|---|
| **ಸಾಕ್ಷಿದಾರರ ಹೆಸರು** | : | **ಶ್ರೀ ರಮೇಶ್ ಜೆ.** |
| **ತಂದೆಯ ಹೆಸರು** | : | **ಜಯರಾಮಪ್ಪ** |
| **ವಯಸ್ಸು** | : | **48 ವರ್ಷ** |
| **ಕೆಲಸ** | : | **ಪೊಲೀಸ್ ಇನ್ಸಪೆಕ್ಟರ್, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆ ,** |
| **ವಾಸ ಸ್ಥಳ** | : | **ಬೆಂಗಳೂರು** |

**ಸಾಕ್ಷಿಯನ್ನು ದಿನಾಂಕ 02.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿಃ10.12.2012 ರಿಂದ ದಿಃ1.7.2015 ರ ವರೆಗೆ ಬಳ್ಳಾರಿ ಲೋಕಾಯುಕ್ತ ದಲ್ಲಿ ಪೊಲೀಸ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ19.12.2013 ರಂದು ಸಾಯಂಕಾಲ 5.00 ಗಂಟೆಗೆ ಡಿವೈ ಎಸ್ ಪಿ ಗಂಗಾಧರ ರವರು ಪಂಚರಾದ ಮಹಮ್ಮದ್ ಯೂನಫ್ ಮತ್ತು ಜೆ.ದೇವರಾಜು ರವರನ್ನು ನನಗೆ ಪರಸ್ಪರ ಪರಿಚಯಿಸಿ ರುತ್ತಾರೆ. ನಂತರ ದಿಃ20.12.2013 ರಂದು ಬೆಃ 9.30 ಗಂಟೆಗೆ ಲೋಕಾಯುಕ್ತ ಕಚೇರಿಗೆ ಬರುವಂತೆ ತಿಳಿಸಿರುತ್ತಾರೆ. ಲೋಕಾಯುಕ್ತ ಕಚೇರಿಯಲ್ಲಿ ಕ್ರೈಂ ನಂಃ15/2013 ರಲ್ಲಿ ಕಲಂ 13(1) (ಇ) ಸಹವಾಚಕ 13(2) ಭ್ರಷ್ಟಾಚಾರ ಪ್ರತಿಬಂಧಕ

**Spl.C.No. 59/2017**
**P.W. 15 (C.W.89)**
**Date : 02.03.2026**

ಕಾಯಿದೆ 1988 ರ ಅಡಿಯಲ್ಲಿ ಎಂ.ಸಿ ಸುಬ್ರಹ್ಮಣ್ಯ ರೆಡ್ಡಿ ಎಇಇ ರವರ ವಿರುದ್ಧ ಪ್ರಕರಣ ದಾಖಲಾಗಿರುವುದು ತಿಳಿಸಿದ್ದು ನನಗೂ ಮತ್ತು ಪಂಚರಿಗೂ ಆರೋಪಿಯ ವಿರುದ್ದ ಪಡೆದುಕೊಂಡ ಶೋಧನ ವಾರಂಟ್ ನ ಬಗ್ಗೆ ತಿಳಿಸಿರುತ್ತಾರೆ.

**3.** ದಿಃ20.12.2013 ರಂದು ಬೆಃ 10.45 ಗಂಟೆಗೆ ನಾನು ಮತ್ತು ಪಂಚರು ಮತ್ತು ಪೊಲೀಸ್ ಸಿಬ್ಬಂದಿ ಸೇರಿಕೊಂಡು ನಗರದ ಕಂಟೋನ್ಮೆಂಟ್ ಏರಿಯಾದಲ್ಲಿರುವ ಆಪಾದಿತನ ಕಚೇರಿಗೆ ಹೋಗಿರುತ್ತೇವೆ. ಸದರಿ ಕಚೇರಿಯಲ್ಲಿ ಎಫ್ ಡಿ ಎ ಆಗಿರುವ ಸುಂದರ್ ರವರು ಸಿಕ್ಕಿರುತ್ತಾರೆ. ಅವರಿಗೆ ಆಪಾದಿತ ಸುಬ್ರಹ್ಮಣ್ಯ ರೆಡ್ಡಿ ರವರ ಮೇಲೆ ಪ್ರಕರಣ ದಾಖಲು ಆದ ಬಗ್ಗೆ ತಿಳಿಸಿ ಶೋಧನ ವಾರಂಟ್ ನ್ನು ಎಫ್ ಡಿ ಎ ಸುಂದರ್ ರವರಿಗೆ ತೋರಿಸಿದಾಗ ಅವರು ಅದನ್ನು ಓದಿ ನೋಡಿ ಅದನ್ನು ಮೇಲಾಧಿಕಾರಿಗೆ ತಿಳಿಸಿ ಅನುಮತಿಯನ್ನು ಪಡೆದ ನಂತರ ಶೋಧನೆ ಮಾಡಲು ಸಹಕಾರವನ್ನು ನೀಡಿದ್ದಾರೆ.

**4.** ಆಪಾತದಿನ ಸುಬ್ರಹ್ಮಣ್ಯ ರೆಡ್ಡಿ ರವರ ಕೊಠಡಿಗೆ ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲೆ ಇದ್ದ ಅಲ್ಮೆರಾ ಮತ್ತು ಟೇಬಲ್ ನ್ನು ನಾವು ಶೋಧನೆ ಮಾಡಿದ್ದು ಶೋಧನೆ ಸಮಯದಲ್ಲಿ ಬೆಲೆ ಬಾಳುವ ಯಾವುದೆ ವಸ್ತುಗಳು ದೊರೆಯಲಿಲ್ಲ. ಅಲ್ಮೆರಾದಲ್ಲಿ 5 ರಸೀದಿಗಳನ್ನು ದೊರೆತಿದ್ದು ಶಾಮನೂರು ಶಿವಶಂಕರಪ್ಪ ಶಾಲೆಗೆ ಸಂಬಂಧಿಸಿದಂತೆ ಸುಮಂತ್ ರೆಡ್ಡಿ ರವರು ಕಟ್ಟಿದ ಶಾಲಾ ಶುಲ್ಕದ ರಸೀದಿಗಳಾಗಿರುತ್ತವೆ, ಇನ್ನೊಂದು ನೋಕಿಯ ಮೊಬೈಲ್ ಖರೀದಿ ಮಾಡಿದ ರಿಸೀದಿ ಇರುತ್ತವೆ. 5 ರಸೀದಿಗಳನ್ನು ಪಂಚರ ಸಮಕ್ಷಮದಲ್ಲಿ ಜಪ್ತು ಮಾಡಿಕೊಂಡಿದ್ದೇನೆ. ಸ್ಥಳದಲ್ಲಿ ಶೋಧನ ಪಂಚನಾಮೆಯನ್ನು ಬೆಃ 11.10 ರಿಂದ 1.30 ಗಂಟೆ ವರೆಗೆ ಬರೆದಿರುತ್ತೇವೆ. ಸದರಿ ಪಂಚನಾಮೆಗೆ ನಾನು, ಪಂಚರು ಸಹಿ ಮಾಡಿದ್ದೇವೆ. ಪಂಚನಾಮೆನ್ನು ಈಗಾಗಲೇ ನಿಪಿ.34 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.34(ಬಿ)**

**Spl.C.No. 59/2017**
**P.W. 15 (C.W.89)**
**Date : 02.03.2026**

ಎಂದು ಗುರುತಿಸಲಾಯಿತು. ಶೋಧನ ವಾರಂಟ್ ನ್ನು ಗುರುತಿಸುತ್ತೇನೆ. ಅದನ್ನು ಈಗಾಗಲೇ ನಿಪಿ. 33 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ.33(ಬಿ)** ಎಂದು ಗುರುತಿಸಲಾಯಿತು. ಪಂಚನಾಮೆಯಡಿಯಲ್ಲಿ ಜಪ್ತುಮಾಡಿಕೊಂಡ 5 ರಿಸೀದಿಗಳನ್ನು ಗುರುತಿಸುತ್ತೇನೆ. ಅವುಗಳನ್ನು ಈಗಾಲೇ ನಿಪಿ.35 ರಿಂದ 39 ಎಂದು ಗುರುತಿಸಲಾಗಿದೆ. ಸದರಿ ರಸೀದಿಗಳ ಮೇಲೆ ನನ್ನ ಮತ್ತು ಪಂಚರ ಸಹಿ ಕಂಡು ಬರುತ್ತದೆ.

**ಪಾಟೀ ಸವಾಲುಃ ಶ್ರೀ ಎಲ್.ಎಸ್.ಕೆಃ ವಕೀಲರು ಆರೋಪಿಯ ಪರಃ**

**5.** ನಾವು ಯಾವುದೇ ತನಿಖೆಗೆ ಹೋದ ಸಂದರ್ಭದಲ್ಲಿ ಅಲ್ಲಿ ಮಾಡಿದ ನಡವಳಿಗಳನ್ನು ಬರೆದುಕೊಳ್ಳುತೇವೆ ಮತ್ತು ಇನ್ಸಪೆಕ್ಟರ್ ರವರು ಕೇಸ್ ಡೈರಿಯಲ್ಲಿ ನಮೂದು ಮಾಡುತ್ತಾರೆ ಎನ್ನುವುದು ಸರಿ .

**ಮರು-ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

**ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ, ಸತ್ರ ಮತ್ತು ವಿಶೇಷ ನ್ಯಾಯಾಧೀಶರು,**
**ಬಳ್ಳಾರಿ.**